## **ದಿನಾಂಕ 27.02.2024 ರಂದು ಮಧ್ಯಾಹ್ನ 04.00 ಗಂಟೆಗೆ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಇವರ ಅದ್ಯಕ್ಷತೆಯಲ್ಲಿ ನಡೆದ ರಾಜ್ಯದ 5ನೇ ಬ್ರಾಡ್ ಬ್ಯಾಂಡ್ ಸಮಿತಿ ಸಭೆಯ ನಡವಳಿಗಳು**

ಸಭೆಗೆ ಹಾಜರಾದ ಸದಸ್ಯರು ಹಾಗು ಅಧಿಕಾರಿಗಳು **(ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ).**

ಸಭೆಗೆ ಹಾಜರಾದ ಸದಸ್ಯರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಅದ್ಯಕ್ಷತೆ ವಹಿಸಿದ್ದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸಭೆಯ ಕಾರ್ಯಸೂಚಿಯಂತೆ ವಿಷಯಗಳ ಮಂಡನೆ ಮಾಡಲು ತಿಳಿಸಿದರು. ಸಭೆಯಲ್ಲಿ ಕೆಳಕಂಡ ವಿಷಯಗಳ ಮೇಲೆ ಚರ್ಚೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ-1: ರಾಜ್ಯದಲ್ಲಿ ಸಂಪರ್ಕ ಜಾಲವಿಲ್ಲದ (ನೆಟ್ವರ್ಕ್ ಸೌಲಭ್ಯ) ಗ್ರಾಮಗಳಿಗೆ ಸಂಪರ್ಕ ಜಾಲ ಒದಗಿಸುವ "4G Saturation Project ಯೋಜನೆಯ ಪ್ರಗತಿ ಪರಿಶೀಲನೆ.**

ನಿರ್ದೇಶಕರು DOT LSA-RI ರವರು ಈ ಯೋಜನೆ ಕುರಿತಂತೆ ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

SBC ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ವಿಮಾತಂ, ಜೈತಂ ಮತ್ತು ವಿತಂ, ಕಾರ್ಯದರ್ಶಿಗಳು ಮಾತನಾಡಿ ರಾಜ್ಯದಲ್ಲಿ ನೆಟ್ ವರ್ಕ್ ಸೌಲಭ್ಯವಿಲ್ಲದೆ ಇರುವ 1114 ಗ್ರಾಮಗಳಿವೆ. ಅವುಗಳಿಗೆ ನೆಟ್ ವರ್ಕ್ ಕವರೇಜ್ ಕಲ್ಪಿಸಲು ಒಟ್ಟು 829 ಟವರ್ ಗಳ ನಿರ್ಮಾಣಕ್ಕೆ BSNL ಯೋಜನೆ ರೂಪಿಸಿದೆ. ಇದಕ್ಕೆ ಬೇಕಾಗುವ ಸ್ಥಳಗಳನ್ನು ಜಿಲ್ಲಾಡಳಿತ ಮತ್ತು BSNL ಜಂಟಿಯಾಗಿ ಸರ್ವೇ ನಡೆಸಿ ಇದುವರೆಗೆ 803 ಸ್ಥಳಗಳನ್ನು ಗುರುತಿಸಿದೆ. ಈ ಸ್ಥಳಗಳು ಸರ್ಕಾರಿ ಭೂಮಿ, ಗ್ರಾಮಠಾಣ, ಅರಣ್ಯ, ಖಾಸಗಿ ಮತ್ತು BSNL ಒಡೆತನದ ಜಾಗಗಳಲ್ಲಿ ಬರುತ್ತಿದ್ದು ಆ ಸ್ಥಳಗಳಲ್ಲಿ 2,000 ಚ. ಅ. ಜಾಗವನ್ನು ಟವರ್ ನಿರ್ಮಾಣಕ್ಕಾಗಿ BSNL ಗೆ ವಹಿಸಿ ಕೊಡಲು ಸಂಬಂಧಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು PCCF (Forest Conservation) ರವರಿಗೆ ತಿಳಿಸಲಾಗಿದೆ. ಕೇಂದ್ರ ಸರ್ಕಾರದ ಸೂಚನೆಯಂತೆ ಈ ನಿವೇಶನಗಳನ್ನು ಉಚಿತವಾಗಿ/ವಿನಾಯಿತಿ ದರದಲ್ಲಿ BSNLಗೆ ಹಂಚಿಕೆ ಮಾಡಲು ಕಾನೂನುಗಳಲ್ಲಿ ಅವಕಾಶಗಳನ್ನು ಮಾಡಿಕೊಳ್ಳಲಾಗಿದೆ. ಜಂಟಿ ಸರ್ವೆ ಮೂಲಕ ಮೊದಲ ಹಂತದಲ್ಲಿ ಗುರುತಿಸಿದ್ದ ಸ್ಥಳಗಳ ಪೈಕಿ ಕಂದಾಯ ಮತ್ತು ಗ್ರಾಮಪಂಚಾಯ್ತಿ ಒಡೆತನದ ಜಾಗಗಳಲ್ಲಿ BSNL ಕೋರಿದ್ದ 423 ನಿವೇಶನಗಳನ್ನು ಈಗಾಗಲೆ ವಹಿಸಿಕೊಡಲಾಗಿದೆ. ಉಳಿದ 03 ನಿವೇಶನಗಳನ್ನು ವಹಿಸಿ ಕೊಡಲು ಕ್ರಮವಹಿಸಲಾಗಿದೆ. ಅರಣ್ಯ ಇಲಾಖೆಯ ಜಾಗಗಳಲ್ಲಿ ಗುರುತಿಸಲಾಗಿರುವ 258 ನಿವೇಶನ/ಜಾಗಗಳನ್ನು ವಹಿಸಿಕೊಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

1) ಮೈಸೂರು ವಿಭಾಗದ ಹೊನ್ನಿಗನಹಳ್ಳಿ ಮತ್ತು ಚನ್ನೂರು ಬೀಟ್‌ನ ಪರಿಸರ ಸೂಕ್ಷ್ಮ ವಲಯ ಪ್ರಕರಣಗಳ ಅನುಮೋದನೆ **ಬಾಕಿ ಉಳಿದಿದೆ**. ಈ ಪ್ರಸ್ತಾವನೆಯ ಕುರಿತು ಸರ್ಕಾರ ಗಮನ ಹರಿಸಬೇಕೆಂದು ನಿರ್ದೇಶಕರು, DOT ರವರು ವಿನಂತಿಸಿದರು.

2) ಕಾರವಾರ ಮತ್ತು ಬೆಳಗಾವಿಯಲ್ಲಿ, ಲೋಕೋಪಯೋಗಿ ಇಲಾಖೆಯು ಪ್ರತಿ ಕಿಲೋಮೀಟರಿಗೆ 5 ಲಕ್ಷದಷ್ಟು ಪಿಬಿಜಿ (ಪರ್ಫಾರ್ಮೆನ್ಸ್ ಬ್ಯಾಂಕ್ ಗ್ಯಾರಂಟಿ) ಕೇಳುತ್ತಿರುತ್ತಾರೆ ಆದರೆ RoW ನಿಯಮದ

ಪ್ರಕಾರ, ಇದು ಅಂದಾಜು ವೆಚ್ಚದ **20% ವರೆಗೆ ಮಾತ್ರ ಇರಬೇಕು** ಎಂದು ನಿರ್ದೇಶಕರು, DOT ರವರು ಸಭೆಗೆ ತಿಳಿಸಿದರು.

ಕಾರ್ಯದರ್ಶಿಗಳು, ವಿಮಾತಂ, ಜೈತಂ ಮತ್ತು ವಿತಂ ಮಾತನಾಡಿ ಇದು ಆದ್ಯತೆಯ ಕಾರ್ಯಕ್ರಮವಾಗಿದ್ದು ಪ್ರಧಾನ ಮಂತ್ರಿಗಳು ಸ್ವಯಂ ಪರಿಶೀಲನೆಗೆ ತೆಗೆದುಕೊಳ್ಳುತ್ತಿರುವ "ಪ್ರಗತಿ" ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿದೆ. ಇದುವರೆಗೆ ಹಂಚಿಕೆಯಾಗದೆ ಇರುವ ನಿವೇಶನಗಳು ಯಾರ ಒಡೆತನದಲ್ಲಿವೆ ಮತ್ತು ಏಕೆ ಹಂಚಿಕೆಯಾಗಿಲ್ಲ ಎಂಬುದನ್ನು ತಿಳಿಯಬಯಸಿದಾಗ ಕೆಳಕಂಡ ಕೋಷ್ಟಕದ ಮೂಲಕ ವಸ್ತುಸ್ಥಿತಿಯನ್ನು ಸಭೆಗೆ ವಿವರಿಸಲಾಯಿತು.

| Dept Name | Land Applied | Land allotted | Land Pending |
|---|---|---|---|
| **PANCHYAT** | 101 | 101 | 0 |
| **REVENUE** | 326 | 322 | 4 |
| **FOREST** | 258 | 0 | 258 |
| **KPCL** | 4 | 0 | 4 |
| **BSNL (Pvt. land & own sites)** | 26 | 26 | 0 |
| **BSNL (Pvt. land)** | 77 | 63 | 14 |
| **BSNL (pending land allocation at 2nd phase)** | 0 | 0 | 26 |
| **Total** | **792** | **512** | **306** |

| **Pending Revenue land as on 28th Feb 2024** | | | | | |
|---|---|---|---|---|---|
| **SL no** | **SSA** | **District** | **Sub district** | **Village** | **Remarks** |
| 1 | BANGALORE | RAMANAGARA | KANAKAPURA | Honniganahalli | Meeting done 28-7, Refused to allot, Eco Sensitive Zone. |
| 2 | BIJAPUR | BAGALKOTE | BILGI | BADARADINNI PU.K | Pending with General Manager, KBJNL |

| | | | | | |
|---|---|---|---|---|---|
| | | | | | Rehabilitation office, Bagalkot. |
| 3 | CHIKAMAGALORE | CHIKKAMAGALURU | KALASA | Balige | BSNL is suggests to finalise same other level |
| 4 | SHIMOGA | SHIMOGA | HOSANAGARA | Belur | Presently pending with AC, Sagara. |

| Eco Sensitive Zone. | | | | | | | |
|---|---|---|---|---|---|---|---|
| **Sl No.** | **ba** | **ssa** | **district** | **sub_district** | **village** | **Land Type** | **Pending With** |
| 1 | Shimoga | Chikkamagaluru | Chikkamagaluru | narasimharajapura | vittala | forest | Regional Commissioner Mysore Division. |
| 2 | Shimoga | Chikkamagaluru | Chikkamagaluru | sringeri | gulaganjimane | forest | |
| 3 | BANGALORE | Bangalore | Ramanagara | kanakapura | honniganahalli | revenue | |
| 4 | MYSORE | Mysore | Chamarajanagara | hanur | channur beat | revenue | |

| SL.no | Sub-District | Site Name | Site Hold Remarks BSNL |
|---|---|---|---|
| 1 | BHATKAL | Hasarvalli | Grazzing Land |
| 2 | ANKOLA | Heggar Makkigadde | Grazzing Land |
| 3 | SIDDAPUR | Hejani | Grazzing Land |
| 4 | HONAVAR | Kadnir | Grazzing Land |
| 5 | SIRSI | Kalli | Grazzing Land |
| 6 | HONAVAR | Kota | Grazzing Land |
| 7 | SIRSI | Kudragod | Grazzing Land |
| 8 | HONAVAR | Sampolli | Grazzing Land |

| SL No | Sub-District | Site Name |
|---|---|---|
| 1 | SIDDAPUR | Hemagar |
| 2 | SIDDAPUR | Hukli (Nilkund) |
| 3 | SIDDAPUR | Shigehalli |
| 4 | SIRSI | Balgar |
| 5 | SIRSI | Dhoranagiri |
| 6 | SIRSI | Kodnagadde |

| | | |
|---|---|---|
| 7 | UTTARA KANNADA | Halegouri |
| 8 | UTTARA KANNADA | Lakkabbekeri |
| 9 | YELLAPUR | Komadi |
| 10 | YELLAPUR | Nagarakhan |

**Forest Sites Summary**

| Total Forest Sites | Application submitted | DN received | DN Paid | Returned by forest to BSNL for clarification. | Pending with forest |
|---|---|---|---|---|---|
| 258 | 258 | 144 | 127 | 71 | 43 |

**WILDLIFE PARVESH DATA**

| Total | Forwarded to NBWL | Pending to be referred to SBWL |
|---|---|---|
| 71 | 35 | 36 |

ಈ ಬಗ್ಗೆ ಸುಧೀರ್ಗ ಚರ್ಚೆ ನಡೆಸಿದ ನಂತರ ಸಭೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳ ಪೈಕಿ ಮೊದಲನೇ ಹಂತದಲ್ಲಿ ಸಲ್ಲಿಕೆಯಾಗಿ ಕಂದಾಯ ಇಲಾಖೆಗಳಲ್ಲಿ ಇತ್ಯರ್ಥಕ್ಕೆ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಹದಿನೈದು ದಿನಗಳಲ್ಲಿ ಇತ್ಯರ್ಥ ಪಡಿಸಿ ನಿವೇಶನಗಳನ್ನು BSNL ಗೆ ಹಸ್ತಾಂತರಿಸಲು ಆಯಾ ಇಲಾಖಾ ಮುಖ್ಯಸ್ಥರು ಕ್ರಮ ಕೈಗೊಳ್ಳುವುದು.
2. ಅರಣ್ಯ ಇಲಾಖೆಯು BSNL ನಿಂದ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ಅವು ಸಲ್ಲಿಕೆಯಾದ ಎರಡು ವಾರಗಳ ಒಳಗೆ ಪರಿಶೀಲಿಸಿ ಇತ್ಯರ್ಥ ಪಡಿಸಿ ನಿವೇಶನಗಳನ್ನು ವಹಿಸಿಕೊಡುವುದು.
3. ಕಂದಾಯ ಇಲಾಖೆ ಒಡೆತನದ ಜಾಗಗಳಲ್ಲಿ ಗುರುತಿಸಿದ ಸ್ಥಳಗಳ ಪ್ರಸ್ತಾವನೆಗಳನ್ನು (ಪರಿಸರ ಸೂಕ್ಷ್ಮ ವಲಯ(04 ಸಂಖ್ಯೆ), ಸೋಪ್ಪಿನ ಬೆಟ್ಟ ಭೂಮಿ (10 ಸಂಖ್ಯೆ) & ಮೇವಿನ ಭೂಮಿ (08 ಸಂಖ್ಯೆ) ವಿಳಂಬ ಮಾಡದೆ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರು and ಜಿಲ್ಲಾಧಿಕಾರಿಗಳು ತುರ್ತು ಕ್ರಮವನ್ನು ವಹಿಸಲು ಸೂಚಿಸುವುದು.
4. ಖಾಸಗಿ ಜಮೀನುಗಳಲ್ಲಿ ಗುರುತಾಗಿರುವ ಸ್ಥಳಗಳನ್ನು ತುರ್ತಾಗಿ ಪಡೆಯಲು BSNL ಕ್ರಮ ವಹಿಸುವುದು.
5. BSNLನಲ್ಲಿ ಈಗಾಗಲೆ ಲಭ್ಯವಿರುವ ನಿವೇಶನಗಳಲ್ಲಿ ಟವರ್ ನಿರ್ಮಾಣದ ಕೆಲಸ ಪ್ರಾರಂಭಿಸುವುದು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ; ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ; ಕಾರ್ಯದರ್ಶಿಗಳು, ವಿಮಾತಂ, ಜೈತಂ

ಮತ್ತು ವಿತಂ ಇಲಾಖೆ; ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ; ಸಂಬಂಧಿಸಿದ ಜಿಲ್ಲಾಧಿಕಾರಿಗಳು; PCCF, (ಅರಣ್ಯ ಸಂರಕ್ಷಣೆ); ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL; ನಿರ್ದೇಶಕರು ಪಂಚಾಯತ್ ರಾಜ್; ನಿರ್ದೇಶಕರು, ವಿಮಾತಂ ಮತ್ತು ಜೈತಂ ಇಲಾಖೆ; ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ).

## ವಿಷಯ-2: RoW ಅರ್ಜಿಗಳ ವಿಲೇವಾರಿ ಪ್ರಗತಿ ಪರಿಶೀಲನೆ

ಟೆಲಿಕಾಂ ಮೂಲ ಸೌಕರ್ಯಗಳ ಸ್ಥಾಪನೆಗೆ ಕೇಂದ್ರ ಸರ್ಕಾರದಿಂದ ಪರವಾನಗಿ ಪಡೆದು ಬಂದಿರುವ TIPs/TSPs/IPs (ದೂರಸಂಪರ್ಕ ಇಂಟರ್‌ನೆಟ್ ಸೇವಾ ಪೂರೈಕೆದಾರರು/ ದೂರಸಂಪರ್ಕ ಸೇವಾ ಪೂರೈಕೆದಾರರು/ ಮೂಲಸೌಕರ್ಯ ಪೂರೈಕೆದಾರರು) ಕಂಪನಿಗಳು ROWಗೆ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳ ವಿಲೇವಾರಿ ಪ್ರಗತಿಯ ಪಕ್ಷಿ ನೋಟವನ್ನು ಕೆಳಗಿನಂತೆ ಸಭೆಯ ಮುಂದೆ ಮಂಡಿಸಲಾಯಿತು.

| ROW Pendency as on 27.02.2024 | | | | |
|---|---|---|---|---|
| Department | less than 60 days | > 60days | > 90 days | Grand Total |
| BBMP | 992 | 186 | 1178 | 600 |
| DMA | 1134 | 146 | 1348 | 1183 |
| RDPR | 0 | 1203 | 1203 | 245 |
| **Grand Total** | **2126** | **1535** | **3729** | **2028** |

ನಿರ್ದೇಶಕರು, DoT, LSA ರವರು ಈ ಕೆಳಗಂಡ ಸಮಸ್ಯೆಗಳನ್ನು ವಿವರಿಸಿದರು :

(i) ROW ಅರ್ಜಿಗಳ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸಿದ ಅಧ್ಯಕ್ಷರು BBMP, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಲ್ಲಿ 60 ದಿನಗಳು ಕಳೆದರು ಅರ್ಜಿಗಳ ವಿಲೇವಾರಿ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು.

(ii) ROW ಪೋರ್ಟಲ್‌ನಲ್ಲಿ ಲೋಕೋಪಯೋಗಿ ಇಲಾಖೆ (PWD) ಅರ್ಜಿಗಳನ್ನು ಸಲ್ಲಿಸಲು ಯಾವುದೇ ವ್ಯವಸ್ಥೆ ಇರುವುದಿಲ್ಲ ಮತ್ತು ಲೋಕೋಪಯೋಗಿ ಇಲಾಖೆಯು ROW ಅರ್ಜಿಗಳನ್ನು ಭೌತಿಕವಾಗಿಯು ಸ್ವೀಕರಿಸುತ್ತಿಲ್ಲ ಎಂಬ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಯಿತು.

(iii) ಬಿ.ಬಿ.ಎಂ.ಪಿ. ROW (ರೈಟ್ ಆಫ್ ವೇ) ಪೋರ್ಟಲ್‌ನಲ್ಲಿ OFC (ಆಪ್ಟಿಕಲ್ ಫೈಬರ್ ಕೇಬಲ್) ಗೆ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಎಂದು ನಿರ್ದೇಶಕರು, DoT, LSA ರವರು ತಿಳಿಸಿದರು.

(iv) ಬಿ.ಬಿ.ಎಂ.ಪಿ. ಯೊಂದಿಗೆ ಸಂಬಂಧ ಹೊಂದಿರುವ ಗುತ್ತಿಗೆದಾರರು CBuD (Call before u dig) ಅಪ್ಲಿಕೇಶನ್ ಮೂಲಕ ಮಾಹಿತಿ ನೀಡದೆ ಭೂಗತ ದೂರಸಂಪರ್ಕ ಮೂಲಸೌಕರ್ಯಕ್ಕೆ ಹಾನಿ ಮಾಡುತ್ತಿದ್ದಾರೆ ಎಂದು ನಿರ್ದೇಶಕರು, DoT, LSA ರವರು ತಿಳಿಸಿದರು .

ROW ಪೋರ್ಟಲ್‌ಗಳ ನಿರ್ವಹಣೆಯಲ್ಲಿಯೂ ಭಾರತ ಸರ್ಕಾರದ ಮಾರ್ಗ ಸೂಚಿಗಳು ಸರಿಯಾಗಿ ಪಾಲನೆಯಾಗುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದು ಅದರ ಸಂಕ್ಷಿಪ್ತ ವಿವರವನ್ನು ಕೆಳಗಿನಂತೆ ನೀಡಲಾಯಿತು :-

| Sl no | Pending issues | BBMP | UDD | RDPR |
|---|---|---|---|---|
| 1 | Implementation of ROW charges as Rs 1 per Mtr. | Pending | Yes | Yes |
| 2 | Central State Integration Of ROW portal | Pending | Pending | Pending |
| 3 | Removal of Form-3 | NA | Pending | NA |
| 4 | Provision of Deemed approval | Yes | Yes | Yes |

ಚರ್ಚೆಯ ನಂತರ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು :-

- ROW ಅರ್ಜಿಗಳ ವಿಲೇವಾರಿಯನ್ನು ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತರು; ಪೌರಾಡಳಿತ ಇಲಾಖಾ ನಿರ್ದೇಶಕರು (DMA) ಮತ್ತು ಜಂಟಿ ನಿರ್ದೇಶಕರು (MRC), DoT ಅಧಿಕಾರಿಗಳು ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

- Removal of Form-3 ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

- Gatishakti Sanchar Portal ಗೆ ಇಲಾಖಾ Portal ನಿಂದ ಸಂಪರ್ಕವನ್ನು ಕುರ್ತಾತಾಗಿ ಕಲ್ಪಿಸುವುದು.

- ಲೋಕೋಪಯೋಗಿ ಇಲಾಖೆಗೆ ROW ಅರ್ಜಿಗಳನ್ನು ಸಲ್ಲಿಸಲು ROW ಪೋರ್ಟಲ್‌ನ ವ್ಯವಸ್ಥೆ ಮಾಡಲು ತುರ್ತು ಕ್ರಮ ವಹಿಸಲು ಸೂಚಿಸಿದರು. ROW ಪೋರ್ಟಲ್ ಸಿದ್ಧವಾಗುವವರೆಗೆ, ROW ಅರ್ಜಿಗಳನ್ನು ಭೌತಿಕವಾಗಿ ಸ್ವೀಕರಿಸಲು ಕ್ರಮಬದ್ಧ ವ್ಯವಸ್ಥೆ ಮಾಡಲು ಸಹ ತಿಳಿಸಿದರು.

- ಬಿ.ಬಿ.ಎಂ.ಪಿ ROW (ರೈಟ್ ಆಫ್ ವೇ) ಪೋರ್ಟಲ್‌ನಲ್ಲಿ OFC ಅರ್ಜಿಗಳನ್ನು ಸ್ವೀಕರಿಸಲ್ಲು ತುರ್ತು ಕ್ರಮ ವಹಿಸಲು ಸೂಚಿಸಿದರು.

ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ನಗರಾಭಿವೃದ್ಧಿ ಇಲಾಖೆಯ ಬಾಕಿ ಉಳಿದಿರುವ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ಮಾರ್ಚ್ 2024 ಮೊದಲನೆಯ ವಾರದಲ್ಲಿ ಪ್ರತ್ಯೇಕ ಸಭೆಯನ್ನು ನಡೆಸಲು DOT ನಿರ್ದೇಶಕರಿಗೆ ತಿಳಿಸಿದರು.

(**ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ; ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ; ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ; ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ; ನಿರ್ದೇಶಕರು, ಪೌರಾಡಳಿತ ಇಲಾಖೆ; ಆಯುಕ್ತರು, ಪಂಚಾಯತ್ ರಾಜ್ ಇಲಾಖೆ; ಜಂಟಿ ನಿರ್ದೇಶಕರು, (MRC); ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL; ನಿರ್ದೇಶಕರು, DoT, LSA; DGM, KSIIDC).

**ವಿಷಯ-3: RoW ಮತ್ತು MoHUA ಮಾರ್ಗ ಸೂಚಿ ತಿದ್ದುಪಡಿಗಳನ್ನು ತರುವ ಕುರಿತು**

ಟೆಲಿಕಾಂ RoW ನಿಯಮಗಳು 2016 ಕ್ಕೆ ಭಾರತ ಸರ್ಕಾರವು ಕೆಲವು ತಿದ್ದುಪಡಿಗಳನ್ನು ತರಲು ಸೂಚಿಸಿದ್ದು.

a) ROW. ತಿದ್ದುಪಡಿ ನಿಯಮಗಳನ್ನು (2022-23) Central ROW ನೀತಿಯ ಪ್ರಕಾರ ಅಳವಡಿಸುವುದು. ಈ ತಿದ್ದುಪಡಿಯು ಬೀದಿ ಪೀಠೋಪಕರಣಗಳಿಗೆ ಏಕರೂಪದ ಶುಲ್ಕ, ಭೂಗತ ಮೂಲಸೌಕರ್ಯಗಳಿಗೆ ಹಾನಿಯಾದ ಸಂದರ್ಭದಲ್ಲಿ Overground ಟೆಲಿಕಾಂ ಮೂಲಸೌಕರ್ಯಗಳ ತಾತ್ಕಾಲಿಕ ಸ್ಥಾಪನೆ, ಬೀದಿ ಪೀಠೋಪಕರಣಗಳ ಇತ್ಯಾದಿಗಳಿಗೆ ಅವಕಾಶ ನೀಡುತ್ತದೆ. 36 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪೈಕಿ 21 ರಾಜ್ಯಗಳು ಈಗಾಗಲೇ ಐಟಿ ROW ತಿದ್ದುಪಡಿ ನಿಯಮಗಳು, 2022 ಅನ್ನು ಅಂಗೀಕರಿಸಿವೆ. ಈ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ROW ನೀತಿಯು ಗತಿಶಕ್ತಿ ಸಂಚಾರ್ ಪೋರ್ಟಲ್ನಲ್ಲಿ (www.gatishaktisanchar.gov.in) ಲಭ್ಯವಿದೆ.

   ರಾಜ್ಯ ಬ್ರಾಡ್ ಬ್ಯಾಂಡ್ ಸಮಿತಿಯ ಶಿಫಾರಸಿಗೆ ಅನುಸಾರವಾಗಿ, ಕರ್ನಾಟಕ ರಾಜ್ಯಕ್ಕೆ 'ದಿ ಕರ್ನಾಟಕ ಟೆಲಿಗ್ರಾಫ್ ಇನ್ಫ್ರಾಸ್ಟ್ರಕ್ಚರ್ ರೈಟ್ ಆಫ್ ವೇ ರೂಲ್ಸ್ 2023' ಎಂದು ಕರೆಯಲಾಗುವ ಏಕೀಕೃತ/ಸಾಮಾನ್ಯ ರೈಟ್ ಆಫ್ ವೇ ರೂಲ್ಸ್/ಬೈಲಾಗಳನ್ನು ರೂಪಿಸಲಾಗಿದೆ. ಇದು ಭಾರತೀಯ ಟೆಲಿಗ್ರಾಫ್ ರೈಟ್ ಆಫ್ ವೇ ರೂಲ್ಸ್ 2016ಗೆ ಅನುಗುಣವಾಗಿದೆ, ಇದು ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ರಾಜ್ಯ ಸರ್ಕಾರದ ಅಡಿಯಲ್ಲಿರುವ ಇತರ ಸಾರ್ವಜನಿಕ ಘಟಕಗಳಿಗೆ ಆಯಾ ವ್ಯಾಪ್ತಿಗಳಲ್ಲಿ ಭೂಗತ ಮತ್ತು ಭೂಮಿಯ ಮೇಲೆ ಟೆಲಿಕಾಂ ಮೂಲಸೌಕರ್ಯವನ್ನು ಸುಗಮಗೊಳಿಸಲು ಮತ್ತು ನಿಯಂತ್ರಿಸಲು ಅನುವು ಮಾಡಿಕೊಡುತ್ತದೆ.

   ಪ್ರಸ್ತುತ ಕಡತವು ನಗರಾಭಿವೃದ್ಧಿ ಇಲಾಖೆ ಸಚಿವಾಲಯದಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

b) 2022ರ ಮಾರ್ಚ್‌ನಲ್ಲಿ MOHUA. ಹೊರಡಿಸಿದ ಬಿಲ್ಡಿಂಗ್ ಬೈಲಾಗಳಿಗೆ ತಿದ್ದುಪಡಿಯನ್ನು ರಾಜ್ಯ ಬೈಲಾಗಳ ಪ್ರಕಾರ ಅಳವಡಿಸುವುದು. ಇದು ಕಟ್ಟಡಗಳಲ್ಲಿ ಮತ್ತು ಗೇಟೆಡ್ ಸೊಸೈಟಿಗಳಲ್ಲಿ ದೃಢವಾದ ಟೆಲಿಕಾಂ ಸಂಪರ್ಕಕ್ಕೆ ಸಹಾಯ ಮಾಡುತ್ತದೆ.

   ಯುಡಿಡಿ/ಪಟ್ಟಣ ಯೋಜನಾ ಇಲಾಖೆಗಳು ತಿದ್ದುಪಡಿಗಳನ್ನು ಮಾಡಿವೆ ಮತ್ತು ಪ್ರಸ್ತುತ ಕಡತವು ಮಾನ್ಯ ನಗರಾಭಿವೃದ್ಧಿ ಸಚಿವರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆಯು ಶೀಘ್ರವಾಗಿ ಕ್ರಮ ಕೈಗೊಳ್ಳುವುದು.

ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ನಗರಾಭಿವೃದ್ಧಿ ಇಲಾಖೆಯ ಬಾಕಿ ಉಳಿದಿರುವ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ಮಾರ್ಚ್ 2024 ಮೊದಲನೆಯ ವಾರದಲ್ಲಿ ಪ್ರತ್ಯೇಕ ಸಭೆಯನ್ನು ನಡೆಸಲು DOT ನಿರ್ದೇಶಕರಿಗೆ ತಿಳಿಸಿದರು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ; ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ; ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ).

### ವಿಷಯ-4: CBuD ಅನುಷ್ಠಾನ ಕುರಿತು

ರಾಜ್ಯದಲ್ಲಿ ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೋಡುವಾಗ ಆ ಪ್ರದೇಶದಲ್ಲಿ ಮೊದಲೆ ಇರುವ ಕೇಬಲ್, ಪೈಪ್-ಲೈನ್ ಇತ್ಯಾದಿ ಭೂಮಿ ಒಳಗಿನ ಸ್ವತ್ತುಗಳ ರಕ್ಷಣೆ ಮಾಡಿಕೊಳ್ಳಲು ಸಂಬಂಧಿಸಿದವರಿಗೆ CBuD app ಮೂಲಕ ಮುಂಗಡ ಮಾಹಿತಿ ಕಳಿಸಿ ಗುಂಡಿಗಳನ್ನು ತೋಡುವ ಕಾರ್ಯ ನಡಸಬೇಕೆಂಬ ನಿಯಮ ಜಾರಿಯಲ್ಲಿದೆ. ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಮುಖ್ಯ ಕಾರ್ಯದರ್ಶಿಗಳಿಂದ ನಿರ್ದೇಶನ ನೀಡಲ್ಪಟ್ಟಿದರು ಅದು ಜಾರಿಗೆ ಬಂದಿಲ್ಲ ಎಂಬ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು.

| TOTAL ASSEST OWNERS | DEPARTMENTS | AGENCIES | TEHSIL | REGISTERED EXCAVATORS | TOTAL ENQUIRY RECEIVED | ONGOING ENQUIRY | UNAUTHORI ZED EXCAVATION |
|---|---|---|---|---|---|---|---|
| 1093 | 10 | 90 | 5539 | 407 | 412 | 24 | 64 |

ರಾಜ್ಯದ ಎಲ್ಲ ಯುಟಿಲಿಟಿ ಏಜೆನ್ಸಿಗಳು CBuD app ನಲ್ಲಿ ಮುಂಗಡ ಮಾಹಿತಿ ನೀಡದೆ ರಸ್ತೆ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೊಡುವ ಕಾರ್ಯ ನಡೆಸದಿರುವಂತೆ ಕ್ರಮ ವಹಿಸಲು ಎಲ್ಲ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಯಿತು.

**[ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು-ನಗರಾಭಿವೃದ್ಧಿ ಇಲಾಖೆ; ಮುಖ್ಯ ಆಯುಕ್ತರು, ಬಿ.ಬಿ.ಎಂಪಿ; ಅಧ್ಯಕ್ಷರು, BWSSB; ಜಂಟಿ ನಿರ್ದೇಶಕರು, (MRC)].

### ವಿಷಯ-6: ಪ್ರಧಾನ ಮಂತ್ರಿಗಳ ಗತಿಶಕ್ತಿ - NMP ಪೋರ್ಟಲ್ ನಲ್ಲಿ ಮಾಹಿತಿಗಳನ್ನು ಒದಗಿಸುವ ಕುರಿತು.

ಪ್ರಧಾನ ಮಂತ್ರಿಗಳ ಗತಿಶಕ್ತಿ NMP ಪೋರ್ಟಲ್‌ನಲ್ಲಿ ಮಾಹಿತಿಗಳನ್ನು ಹಾಕುವ ಕೆಲಸವು ತೃಪ್ತಿದಾಯಕವಾಗಿ ನಡೆದಿದೆಯಾದರೂ ಅದನ್ನು ಸರಿಯಾದ ನಮೂನೆಯಲ್ಲಿ (Format) BISAG-N ಸೂಚಿಸಿದ ಸ್ವರೂಪದಲ್ಲಿ ತುಂಬಿಲ್ಲವೆಂಬ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು. ಅದನ್ನು ಸರಿಪಡಿಸುವುದಾಗಿ NMP ಪೋರ್ಟಲ್ ನೋಡಲ್ ಅಧಿಕಾರಿಯ ಪರವಾಗಿ ಶ್ರೀ ಈಶ್ವರ್, DGM, KSIIDC ರವರು ಸಭೆಗೆ ತಿಳಿಸಿದರು. ಶ್ರೀ ಈಶ್ವರ್, ಡಿ.ಜಿ.ಎಂ, ಕೆ.ಎಸ್.ಐ.ಐ.ಡಿಸಿ, BISAG-N - DOT Format ಪ್ರಕಾರ

ದತ್ತಾಂಶವನ್ನು ಒದಗಿಸುವಂತೆ ಎಲ್ಲಾ ಸಂಯೋಜಿತ ಇಲಾಖೆಗಳಿಗೆ ಕೆ.ಎಸ್.ಐ.ಐ.ಡಿಸಿ ಯಿಂದ ಪತ್ರವನ್ನು ಕಳುಹಿಸಿದ್ದಾರೆ ಮತ್ತು ಪ್ರಧಾನ ಮಂತ್ರಿಯ ಗತಿಶಕ್ತಿ ಎನ್‌ಎಂಪಿ ಪೋರ್ಟಲ್‌ನಲ್ಲಿ ಸರಿಯಾದ ಮಾಹಿತಿಯನ್ನು ಹಾಕಲು ಇಲಾಖೆಯಿಂದ ದತ್ತಾಂಶವನ್ನು ಇನ್ನೂ ಸ್ವೀಕೃತವಾಗಿರುವುದಿಲ್ಲ.

| Traffic Light | Government Buildings | Bus Shelters /Terminals | Electric Poles |
|---|---|---|---|
| 617 | 4379 | 38462 (KSRTC) 9598 (BMTC) | 1982614 |

ಚರ್ಚೆಯ ನಂತರ ಸಂಬಂಧ ಪಟ್ಟ ಎಲ್ಲ ಇಲಾಖೆಯವರು DoT ರವರು ಕೋರಿರುವ Format ನಲ್ಲಿ ಮಾಹಿತಿಯನ್ನು ಶೀಘ್ರವೇ ನೀಡುವಂತೆ ಮತ್ತು KSRSAC/Remote sensing agency ರವರಲ್ಲಿ ಲಭ್ಯವಿರುವ ಮಾಹಿತಿಯನ್ನು ಅಂಕೀಕರಿಸಿ NMP ಪೋರ್ಟಲ್ ನಲ್ಲಿ ಮಾಹಿತಿಯನ್ನು ಹಾಕಲು ಶ್ರೀ ಈಶ್ವರ್, DGM, KSIIDC ರವರು ನಿರ್ದೇಶಕರು, DOT & KSRSAC ರವರೊಂದಿಗೆ ಜೊತೆ ಸಮನ್ವಯಗೊಳಿಸುವಂತೆ ಸೂಚಿಸಿದರು.

(**ಕ್ರಮ:** ನಿರ್ದೇಶಕರು, KSRSAC , KSIIDC and DOT)

**ವಿಷಯ-8: FTTH Saturation Project**

ಭಾರತ ಸರ್ಕಾರದ ಯುನಿವರ್ಸಲ್ ಸರ್ವಿಸ್ ಒಬ್ಲಿಗೇಷನ್ ಫಂಡ್ (USOF ) ನಿಂದ ಹಣಕಾಸು ಒದಗಿಸಲಾದ ಭಾರತನೆಟ್ ಯೋಜನೆಯ ಭಾಗವಾಗಿ ಗ್ರಾಮ ಪಂಚಾಯತ್ ಮಟ್ಟದವರೆಗೆ ಫೈಬರ್ ಆಪ್ಟಿಕ್ಸ್ ಅಳವಡಿಸಲಾಗಿದೆ. ಇದರ ಪರಿಣಾಮವಾಗಿ, ಕರ್ನಾಟಕ ರಾಜ್ಯದ ಎಲ್ಲಾ 6084 ಗ್ರಾಮ ಪಂಚಾಯತ್‌ಗಳಿಗೆ ಮತ್ತು 167 ತಾಲೂಕು ಕೇಂದ್ರಗಳಿಗೆ ಹೆಚ್ಚು ವೇಗದ ಇಂಟರ್‌ನೆಟ್ ಸಂಪರ್ಕವನ್ನು ಒದಗಿಸಲಾಗಿದೆ.

ಈಗ ಭಾರತ ಸರ್ಕಾರವು ಭಾರತನೆಟ್ ಮೂಲಸೌಕರ್ಯವನ್ನು ಬಳಸಿಕೊಂಡು ಫೈಬರ್-ಟು-ದಿ-ಹೋಮ್ (ಎಫ್. ಟಿ. ಟಿ. ಎಚ್) ಸ್ಯಾಚುರೇಷನ್ ಯೋಜನೆಯ ಮೂಲಕ ಗ್ರಾಮಗಳ ಪ್ರತಿಯೊಂದು ಮನೆಗೂ ಉಚಿತ ಹೆಚ್ಚು ವೇಗದ ಇಂಟರ್‌ನೆಟ್ ಸಂಪರ್ಕ ಒದಗಿಸಲು ಸಿದ್ಧವಾಗಿದೆ. ಈ ಯೋಜನೆಯಲ್ಲಿ ಗ್ರಾಹಕರು ಬಳಕೆಯ ಶುಲ್ಕಗಳನ್ನು ಮಾತ್ರ ಭರಿಸಬೇಕಾಗುತ್ತದೆ.

BSNL 'ಗ್ರಾಮ ಪಂಚಾಯತಿಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ' ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ಅಂತರ್ಜಾಲದ ಸೌಲಭ್ಯ ಒದಗಿಸಿದೆ. ಆದರೆ, ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಶಾಲೆ, ಆರೋಗ್ಯ ಕೇಂದ್ರ, ಅಂಗನವಾಡಿ, ಗ್ರಂಥಾಲಯಗಳಿಗೆ ಸಂಪರ್ಕ ಕಲ್ಪಿಸಲು ತಗಲುವ ನಿರ್ವಹಣಾ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲ. ಹಾಗಾಗಿ, ಪಂಚಾಯಿತಿ ಕೇಂದ್ರದಿಂದ ಅದರ ವ್ಯಾಪ್ತಿಯೊಳಗೆ ಬರುವ ಉದ್ಯಮಿಗಳು ಮತ್ತು ಆಸಕ್ತ ನಾಗರಿಕರಿಗೆ ಇಂಟರ್ನೆಟ್ ಸೌಲಭ್ಯ ಒದಗಿಸಲು ಪಂಚಾಯಿತಿಗಳಲ್ಲಿ ಇ-ಸರ್ವರ್ ರೂಮ್ ಸ್ಥಾಪಿಸಲು TIP ಗಳಿಗೆ ಅವಕಾಶ ನೀಡುವಂತೆ & ಗ್ರಾಮ ಪಂಚಾಯಿತಿಗಳಲ್ಲಿನ OLT ಉಪಕರಣಗಳನ್ನು ರಾತ್ರಿಯಲ್ಲಿ ನಿಷ್ಕ್ರಿಯಗೊಳಿಸದಂತೆ ಸೂಚಿಸಬೇಕು

ಎಂದು ಪಂಚಾಯತ್ ರಾಜ್ ಇಲಾಖೆಗೆ ಸೂಚಿಸಬೇಕು. ಈ ಸಂಬಂಧ ನಿರ್ದೇಶಕರು, ಪಂಚಾಯತ್ ರಾಜ್ ರವರು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.

**(ಕ್ರಮ:**ಕಾರ್ಯದರ್ಶಿಗಳು, e-Governance; ಆಯುಕ್ತರು, ಪಂಚಾಯತ್ ರಾಜ್ ಇಲಾಖೆ; ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL,BBNL.)

## ವಿಷಯ-9: ಕೌಶಲ್ಯ ಅಭಿವೃದ್ಧಿ ಯೋಜನೆ ಕುರಿತು

ಐಟಿಐ ಮತ್ತು ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳು ಮುಂಬರುವ ಟೆಲಿಕಾಂ 5ಜಿ Rolloutಗೆ ವಿದ್ಯಾರ್ಥಿಗಳನ್ನು ತರಬೇತಿ ನೀಡಲು ಐಸಿಟಿ ವಿಷಯಗಳ ಕೋರ್ಸ್‌ಗಳನ್ನು (5ಜಿ, ಐಒಟಿ, ಎಂ2ಎಂ, ಎಐ ಇತ್ಯಾದಿಗಳಲ್ಲಿ ಉದಯೋನ್ಮುಖ ಉದ್ಯೋಗಗಳಿಗೆ ಸಂಬಂಧಿಸಿದಂತೆ) ಪರಿಚಯಿಸಬೇಕು. ಈ ಕೋರ್ಸ್‌ಗಳನ್ನು ಪರಿಚಯಿಸಲು ಕೌಶಲ್ಯ ಅಭಿವೃದ್ಧಿ ಮತ್ತು ಉನ್ನತ ಶಿಕ್ಷಣ ಇಲಾಖೆಗಳು ಪ್ರೋತ್ಸಾಹಿಸಲ್ಲು ಸೂಚಿಸಿದರು.

ಭವಿಷ್ಯದ ದೂರಸಂಪರ್ಕ ಉದ್ಯೋಗಾವಕಾಶಗಳಿಗೆ ತಯಾರಿಯಾಗಲು, ಡಿಜಿಟಲ್ ಸಂವಹನ ಸಿದ್ಧತಾ ಸೂಚ್ಯಂಕದಲ್ಲಿ (DCRI), ರಾಜ್ಯ ಸರ್ಕಾರಗಳು ಐಟಿಐಗಳಲ್ಲಿ 15% ಐಸಿಟಿ (ICT) ಕೋರ್ಸ್‌ಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ 75% ಐಸಿಟಿ ಕೋರ್ಸ್‌ಗಳನ್ನು ಸೇರ್ಪಡಿಸಬೇಕಾಗಿದೆ.

5G ತಂತ್ರಜ್ಞಾನದ ಬಳಕೆಯಿಂದ ಹೊಸ ಅವಕಾಶಗಳು ಸೃಷ್ಟಿಯಾಗಲಿವೆ. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY), ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (NULM) ಮುಂತಾದ ವಿವಿಧ ಸರ್ಕಾರಿ ಯೋಜನೆಗಳ ಅಡಿಯಲ್ಲಿ ಕೌಶಲ್ಯ ತರಬೇತಿ ಗುರಿಗಳನ್ನು ನಿಗದಿಪಡಿಸುವಾಗ, SSDM/SSDC ಗಳು ನಿರ್ದಿಷ್ಟವಾಗಿ 5G ಕೌಶಲ್ಯ ತರಬೇತಿಗಾಗಿ ತರಬೇತಿ ಗುರಿಗಳು ಮತ್ತು ಅನುದಾನವನ್ನು ಒದಗಿಸಲು DOT ರವರು ಕೋರಿದೆ .

5G ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ಮತ್ತು 5G ತರಬೇತಿ ಗುರಿಗಳನ್ನು ಸಾಧಿಸಲು ದೂರಸಂಪರ್ಕ ವಲಯ ಕೌಶಲ್ಯ ಮಂಡಳಿ (TSSC) ಯನ್ನು ಸಂಪರ್ಕಿಸಬಹುದು. TSSC ಗೆ ಅಗತ್ಯ ನೋಂದಣಿ ಪ್ರಕ್ರಿಯೆಗಾಗಿ SSDM ಗಳೊಂದಿಗೆ ಸಂಯೋಜನೆ ಮಾಡಲು ಈಗಾಗಲೇ ಸೂಚನೆ ನೀಡಲಾಗಿದೆ.

ದೂರಸಂಪರ್ಕ ಇಲಾಖೆ (DoT) ಆಪ್ಟಿಕಲ್ ಫೈಬರ್ ಟೆಕ್ನಿಷಿಯನ್ ಕೌಶಲ್ಯಗಳು (ಸ್ಪ್ಲೈಸಿಂಗ್ ಇತ್ಯದಿ) ಒದಗಿಸಲು 5 ರಿಂದ 10 ಐಟಿಐಗಳನ್ನು ಗುರುತಿಸಲು ಮತ್ತು ಅಗತ್ಯ ನಿರ್ವಹಣಾ ಪೆಟ್ಟಿಗೆ ಮತ್ತು ಸಾಧನಗಳನ್ನು ವ್ಯವಸ್ಥೆ ಮಾಡಲು ಐಟಿಐಗಳಿಗೆ DoT ರವರು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ/ ಕೌಶಲ್ಯ ಅಭಿವೃದ್ಧಿ ಇಲಾಖೆಯೊಂದಿಗೆ ಸಮನ್ವಯಗೊಳಿಸುತ್ತೆವೆ ಎಂದು ತಿಳಿಸಿದರು.

### ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ. :

ಈಗಾಗಲೇ ಭಾರತ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಾಯೋಗಿಕವಾಗಿ ಮಾಗಡಿ ಮತ್ತು ಚಿತ್ರದುರ್ಗದಲ್ಲಿ ತರಬೇತಿ ಆರಂಭಿಸಲು ಜಿ.ಟಿ.ಟಿ.ಸಿ ಈಗಾಗಲೇ ಯೋಜನೆ ರೂಪಿಸುತ್ತಿದೆ ಮತ್ತು ICT ವಿಷಯದ ಮೇಲೆ, NCVT ಅನುಮೋದನೆ ಬಾಕಿ ಇದೆ ಎಂದು ಸಲಹೆಗಾರ, ಎಸ್.ಡಿ.ಇ.ಎಲ್ ರವರು ಮಾಹಿತಿ ನೀಡಿದರು.

**(ಕ್ರಮ:**ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ; ಪ್ರಧಾನ ಕಾರ್ಯದರ್ಶಿಗಳು ಕೌಶಲ್ಯ ಅಭಿವೃದ್ಧಿ ಇಲಾಖೆ; ವ್ಯವಸ್ಥಾಪಕ ನಿರ್ದೇಶಕರು, ಕೌಶಲ್ಯ ಮಿಷನ್).

**ವಿಷಯ-10: ಡಿ. ಸಿ. ಆರ್. ಐ (DCRI) ಸಮಸ್ಯೆಗಳು:**

ಭಾರತವನ್ನು ಡಿಜಿಟಲ್ ಸಶಕ್ತ ಸಮಾಜವನ್ನಾಗಿ ಪರಿವರ್ತಿಸಲು ಅಗತ್ಯವಾದ ಡಿಜಿಟಲ್ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವತ್ತ ಗಮನಹರಿಸಿ ಡಿ. ಸಿ. ಆರ್. ಐ. ಅನ್ನು ವಿನ್ಯಾಸಗೊಳಿಸಲಾಗಿದೆ. ದೂರಸಂಪರ್ಕ ಸೇವೆಗಳ ಸುಗಮ ವಿಸ್ತರಣೆ ಮತ್ತು ಕಾರ್ಯಾಚರಣೆಯನ್ನು ಸುಗಮಗೊಳಿಸುವಲ್ಲಿ ರಾಜ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಸಂವಹನ ಕ್ಷೇತ್ರಕ್ಕೆ ಆದ್ಯತೆ ನೀಡಲು ರಾಜ್ಯಗಳನ್ನು ಪ್ರೋತ್ಸಾಹಿಸುವುದು ಡಿ. ಸಿ. ಆರ್. ಐ. ಯ ಉದ್ದೇಶವಾಗಿದೆ. ಟೆಲಿಕಾಂ ವಲಯಕ್ಕೆ ಸಂಬಂಧಿಸಿದ ನಿರ್ದಿಷ್ಟ ಸೂಚಕಗಳನ್ನು ಬಳಸಿಕೊಂಡು ಸೂಚ್ಯಂಕದ ಚೌಕಟ್ಟು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ ಮತ್ತು ಟೆಲಿಕಾಂ ನೆಟ್ವರ್ಕ್ ಮತ್ತು ಸೇವೆಗಳನ್ನು ವೇಗಗೊಳಿಸಲು ಮತ್ತು ವಿಸ್ತರಿಸಲು ರೈಟ್ ಆಫ್ ವೇ (ROW) ಅರಣ್ಯ ಅನುಮತಿ, ಗೋಪುರ ಸ್ಥಾಪನೆ ಅನುಮತಿ, ವಿದ್ಯುತ್ ಸಂಪರ್ಕಗಳು ಮುಂತಾದ ನಿರ್ಣಾಯಕ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಪ್ರಾರಂಭಿಸಲು ಪ್ರೇರೇಪಿಸುತ್ತದೆ. ಈ ಉಪಕ್ರಮವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ತಮ್ಮ ಪ್ರಯತ್ನಗಳನ್ನು ಸರಿಯಾದ ದಿಕ್ಕಿನಲ್ಲಿ ಸುವ್ಯವಸ್ಥಿತಗೊಳಿಸಲು ಮತ್ತು ಸಾಧನೆಗಳನ್ನು ಸೆರೆಹಿಡಿಯಲು ದತ್ತಾಂಶ ವ್ಯವಸ್ಥೆಗಳನ್ನು ಹೆಚ್ಚಿಸಲು ಅಧಿಕಾರ ನೀಡುತ್ತದೆ. ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ ಚೌಕಟ್ಟಿನಲ್ಲಿ ವಿವರಿಸಿರುವ ನೀತಿಗಳನ್ನು ಜಾರಿಗೆ ತರಲು ರಾಜ್ಯಗಳಿಗೆ ಒಂದು ವರ್ಷದ ಕಾಲಾವಧಿಯನ್ನು ಒದಗಿಸಲಾಗಿದೆ. 2023-24 ರ ಅವಧಿಯಲ್ಲಿ ರಾಜ್ಯಗಳ ಕ್ರಮಗಳು ಮತ್ತು ಸಾಧನೆಗಳ ಆಧಾರದ ಮೇಲೆ ಮೌಲ್ಯಮಾಪನ ಪ್ರಕ್ರಿಯೆಯು ಏಪ್ರಿಲ್ 2024ರಲ್ಲಿ ಪ್ರಾರಂಭವಾಗುತ್ತದೆ

I.T. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಇಲಾಖೆಯು ಎಲ್ಲಾ ಡಿ. ಸಿ. ಆರ್. ಐ. ಸೂಚಕಗಳನ್ನು ಆಯಾ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಬಂಧಿತ ಇಲಾಖೆಗಳೊಂದಿಗೆ ಸಂಯೋಜಿಸುವ ಅಗತ್ಯವಿದೆ. ಪ್ರತಿ ಲೈನ್ ಡಿಪಾರ್ಟ್ಮೆಂಟ್ಗೆ ಸಿಂಗಲ್ ಪಾಯಿಂಟ್ ಆಫ್ ಕಾಂಟ್ಯಾಕ್ಟ್ (ಎಸ್ಪಿಒಸಿ) ಅನ್ನು ಗೊತ್ತುಪಡಿಸಬೇಕು ಮತ್ತು ಅವರ ಸಂಪರ್ಕ ಮಾಹಿತಿಯನ್ನು (ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿ) ಇಆರ್ಯು, ಡಿಒಟಿಗೆ ತಿಳಿಸಬೇಕು.
ಪ್ರತಿ ಸೂಚಕದ ಸ್ಥಿತಿ ಮತ್ತು ಪೂರಕ ದಾಖಲೆಗಳನ್ನು ಒಳಗೊಂಡ ವರದಿಯನ್ನು ಒಂದು ವಾರದೊಳಗೆ ಡಿ. ಓ. ಟಿ. ಗೆ ಸಲ್ಲಿಸಬೇಕು.

ಇದಲ್ಲದೆ, ERU,DOT. ಯೊಂದಿಗೆ ಡಿ. ಸಿ. ಆರ್. ಐ. ಯ ಎಲ್ಲಾ ಉಪಸ್ತಂಭಗಳಿಗೆ ಉತ್ತಮ ಅಭ್ಯಾಸಗಳನ್ನು ದಾಖಲಿಸುವುದು ಮತ್ತು ಹಂಚಿಕೊಳ್ಳುವುದು ಅತ್ಯಗತ್ಯವಾಗಿದೆ.

ಸಂಬಂಧಪಟ್ಟ ಸರ್ಕಾರದ ಇಲಾಖೆಗಳು ಡಿ.ಸಿ.ಆರ್.ಐ ದತ್ತಾಂಶವನ್ನು ನವೀಕರಿಸಲು ತಕ್ಷಣ ಕ್ರಮ ಕೈಗೊಳ್ಳಲು ಮತ್ತು ತಕ್ಷಣವೇ ನೋಡಲ್ ಅಧಿಕಾರಿಗಳನ್ನು ನೇಮಿಸಿ ಕಾರ್ಯದರ್ಶಿಗಳು, ಐ ಟಿ ಬಿ ಟಿ ಇಲಾಖೆಗೆ ಸಲ್ಲಿಸಲು ಅಧ್ಯಕ್ಷರು ತಿಳಿಸಿದರು.

(**ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಸಂಬಂಧಪಟ್ಟ ಇಲಾಖೆಗಳು, ಕರ್ನಾಟಕ ಸರ್ಕಾರ ).

**ವಿಷಯ-11: ವಿದ್ಯುತ್ ವಲಯದ ಸುಧಾರಣೆಗಳು:**

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) 29.11.2023 ರಂದು "ಸಣ್ಣ ಕೋಶಗಳಿಗೆ ಬೀದಿ ಪೀಠೋಪಕರಣಗಳ ಬಳಕೆ ಮತ್ತು ಏರಿಯಲ್ ಫೈಬರ್ ನಿಯೋಜನೆ" ಕುರಿತು ತನ್ನ ಶಿಫಾರಸುಗಳನ್ನು ನೀಡಿದೆ. ಈ ಶಿಫಾರಸುಗಳನ್ನು ದೂರಸಂಪರ್ಕ ಇಲಾಖೆಯ ಅತ್ಯುನ್ನತ ಸಂಸ್ಥೆಯಾದ ಡಿಜಿಟಲ್ ಸಂವಹನ ಆಯೋಗವು 2023ರ ಮಾರ್ಚ್ 20ರಂದು ನಡೆದ ಸಭೆಯಲ್ಲಿ ಅಂಗೀಕರಿಸಿದೆ.

DOT ರವರಿಂದ ಪ್ರಮುಖ ಶಿಫಾರಸುಗಳ:

**1) ಬೃಹತ್ ಅರ್ಜಿ ಅಪ್‌ಲೋಡ್ (Bulk Application):** ಈ ಶಿಫಾರಸು ಬಳಕೆದಾರರಿಗೆ ಒಂದೇ ಬಾರಿಗೆ ಹಲವಾರು ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಅನುವು ಮಾಡಿಕೊಡುವಂತೆ ಕೋರಿದರು.

**2) ವಿಭಾಗವಾರು ಏಕೀಕೃತ ಬಿಲ್/ಇನ್‌ವಾಯ್ಸ್ ರಚಿಸುವುದು (Division wise single bill):** ಈ ಶಿಫಾರಸು ಪ್ರತಿಯೊಂದು ವಿಭಾಗಕ್ಕೂ ಒಂದೇ ಬಿಲ್/ಇನ್‌ವಾಯ್ಸ್ ಅನ್ನು ರಚಿಸಲು ಅನುವು ಮಾಡಿಕೊಡುವಂತೆ ಕೋರಿದರು.

**3) ಕೈಗಾರಿಕಾ ದರ (Industrial rate):** ಈ ಶಿಫಾರಸು ಕೈಗಾರಿಕೆಗಳಿಗೆ ವಿಶೇಷ ದರಗಳನ್ನು ಒದಗಿಸಲು ಮಾಡಿಕೊಡುವಂತೆ ಕೋರಿದರು.

**ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರು ವಿದ್ಯುತ್ ವಲಯಕ್ಕೆ ಸಂಬಂಧಿಸಿದ ಪ್ರಮುಖ ಶಿಫಾರಸುಗಳನ್ನು ಅಂಗೀಕರಿಸಿ ಮುಂದಿನ ಕ್ರಮ ವಹಿಸುವುದು

(ರಾಕೇಶ್ ಸಿಂಗ್)
ಅಪರ ಮುಖ್ಯ ಕಾರ್ಯದರ್ಶಿ

## ಅನುಬಂಧ-1

**5 ನೇ ರಾಜ್ಯ ಬ್ರಾಡ್‌ಬ್ಯಾಂಡ್ ಸಮಿತಿಯ ಸಭೆಗೆ ಹಾಜರಾದ ಸದಸ್ಯರು ಹಾಗು ಅಧಿಕಾರಿಗಳ ವಿವರ:**

**ಸ್ಥಳ: Hybrid -**ಕೊಠಡಿ ಸಂಖ್ಯೆ:117, 1ನೇ ಮಹಡಿ ವಿಕಾಸಸೌಧ

| ಕ್ರ ಸಂ. | ಹೆಸರು ಮತ್ತು ಹುದ್ದೆ |
|---|---|
| 1 | ಶ್ರೀ. ರಾಕೇಶ್ ಸಿಂಗ್ , ಭಾ.ಆ.ಸೇ,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ |

| | |
|---|---|
| 2 | ಡಾ.ಎನ್.ಮಂಜುಳಾ, ಭಾ.ಆ.ಸೇ,<br>ಸರ್ಕಾರದ ಕಾರ್ಯದರ್ಶಿ, ಮೂಲಸೌಲಭ್ಯ |
| 3 | ಡಾ. ಏಕ್ ರೂಪ್ ಕೌರ್, ಭಾ.ಆ.ಸೆ ,<br>ಸರ್ಕಾರದ ಕಾರ್ಯದರ್ಶಿ, ವಿದ್ಯುನ್ಮಾನ ಮಾತಂ, ಜೈತಂ ಹಾಗೂ ವಿಂತಂ ಇಲಾಖೆ |
| 4 | ಡಾ. ಪರಮೇಶ ಕೆ, ನಿರ್ದೇಶಕರು, ಇಂಧನ ಇಲಾಖೆ |
| 5 | ಶ್ರೀ. ದರ್ಶನ್ ಎಚ್.ವಿ, ಭಾ.ಅ.ಸೇ<br>ನಿರ್ದೇಶಕರು, ವಿದ್ಯುನ್ಮಾನ ಮಾತಂ,ಜೈತಂ ನಿರ್ದೇಶನಾಲಯ |
| 6 | ನೂರ್ ಜಹರ ಖಾನಂ . ಅಪರ ಕಂದಾಯ ಆಯುಕ್ತರು |
| 7 | ಸಂಜೀವ್ ಪೀಕಾ ,<br>ಸಲಹೆಗಾರ ಅಥವಾ ಹಿರಿಯ ಸಲಹೆಗಾರ, DDG of DoT Licensed Service Area (SA), ಕರ್ನಾಟಕ. |
| 8 | ಶ್ರೀಮತಿ ಸುಮಾ ,<br>ಉಪ. ನಿರ್ದೇಶಕರು, ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ (KMDC) ಮತ್ತು ಪದನಿಮಿತ್ತ<br>ನೋಡಲ್ ಅಧಿಕಾರಿ CBUD, ಬೆಂಗಳೂರು |
| 9 | ಶ್ರೀ. ಸುಜಿತ್ ಕುಮಾರ್ .<br>ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬಿ.ಎಸ್.ಎನ್.ಎಲ್, ಬೆಂಗಳೂರು |
| 10 | ಶ್ರೀ. ಎಸ್. ರವಿ ಕುಮಾರ್<br>ಡೆಪ್ಯೂಟಿ ಡೈರೆಕ್ಟರ್ ಜನರಲ್ – ಗ್ರಾಮೀಣ-1, DoT-LSA ಕರ್ನಾಟಕ |
| 11 | ಶ್ರೀ. ಪ್ರಸನ ಹೆಚ್ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ |
| 12 | ಶ್ರೀ ನಾಗರಾಜ್ ಭವಾನಿ, ಪ್ರಧಾನ ವ್ಯವಸ್ಥಾಪಕರು, E&P ಕಿಟ್ಸ್ |
| 13 | ಶ್ರೀಮತಿ. ವಿಜಯ ಕುಮಾರಿ ಕೆ ಸಿ ಉಪ ಕಾರ್ಯ ದರ್ಶಿ (ಸಂ & ಕ ), ಲೋಕೋಪಯೋಗಿ ಇಲಾಖೆ |
| 14 | ಶ್ರೀ. ಅಲಪೆಶ ದೇಶಾಯಿ AGM- (BSNL) |
| 15 | ಶ್ರೀ. ಶಿವಾಣ್ಣಾ ಸಹಾಯಕ ನಿರ್ದೇಶಕರು ನಿರ್ದೇಶಕರು, DOT |
| 16 | ಶ್ರೀಮತಿ. ಯಮುನಾ ಎನ್, ಮುಖ್ಯ ಅಭಿಯಂತರರು , ಬಿ. ಬಿ. ಎಂ. ಪಿ |
| 17 | ಶ್ರೀ. ಸಚಿನ್ ಎಚ್.ಪಿ. ಕಾರ್ಯಪಾಲಕ ಅಭಿಯಂತರರು ( ಒಎಫ್ಸಿ ಸೆಲ್) |
| 18 | ಶ್ರೀ ನಾಗರಾಜ್ ಭವಾನಿ, ಪ್ರಧಾನ ವ್ಯವಸ್ಥಾಪಕರು, E&P ಕಿಟ್ಸ್ |
| 19 | ಶ್ರೀ ಹರಿಪರೀತ , DIPA |
| 20 | ಶ್ರೀ ಮುಖೇಶಕುಮಾರ್ , COAI |
| 21 | ಶ್ರೀ ಗೌತಮ, JIO |